ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL : www.anekal-pa.in

ಸಂಖ್ಯೆ: ಆಯೋಪ್ರಾ:ಎಲ್ಎಒ:16:2015-16 ದಿನಾಂಕ: 03 OCT 2015

**ಅಡಕ:** ನಕ್ಷೆ ಮತ್ತು ಪರಿತ್ಯಜನಾ ಪತ್ರದ ಮಾದರಿ

ಇವರಿಗೆ,

ಆಯುಕ್ತರು,
ನಗರ ಸಭೆ, ಹೆಬ್ಬಗೋಡಿ,
ಆನೇಕಲ್ ತಾಲ್ಲೂಕು.

ಮಾನ್ಯರೇ,

**ವಿಷಯ:** ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಕಮ್ಮಸಂದ್ರ ಗ್ರಾಮದ ಸ.ನಂ.51/1 ಮತ್ತು 51/3ರಲ್ಲಿನ ಒಟ್ಟು 0-20ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕೆ ಏಕ ನಿವೇಶನ ನಕ್ಷೆ ಅನುಮೋದನೆ ಸಂಬಂಧ.

**ಉಲ್ಲೇಖ:** 1.ಅರ್ಜಿದಾರರ ಮನವಿ ದಿನಾಂಕ:4.05.2015.
2. ದಿನಾಂಕ:6.08.2015ರಂದು ನಡೆದ ಪ್ರಾಧಿಕಾರದ 54ನೇ ಸಭೆಯ ವಿಷಯ ಸಂಖ್ಯೆ:40ರ ತೀರ್ಮಾನ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಮನವಿಯಲ್ಲಿ ಅರ್ಜಿದಾರರಾದ ಮೆ.ರೇಡಿಯೆಂಟ್ ಪ್ರಾಪರ್ಟೀಸ್ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಸತ್ಯಶೇಖರ್, ಇವರು ಅತ್ತಿಬೆಲೆ ಹೋಬಳಿ, ಕಮ್ಮಸಂದ್ರ ಗ್ರಾಮದ ಸ.ನಂ.51/1 ಮತ್ತು 51/3ರಲ್ಲಿನ ಒಟ್ಟು 0-20ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಏಕ ನಿವೇಶನ ನಕ್ಷೆ ಅನುಮೋದನೆ ಕೋರಿರುತ್ತಾರೆ.

ಸದರಿಯವರ ಮನವಿಯನ್ನು ಉಲ್ಲೇಖ(2)ರ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಏಕ ನಿವೇಶನ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ. ಅನುಮೋದಿತ ವಲಯನಿಯಮಾವಳಿಗಳನ್ವಯ ಮತ್ತು ಪ್ರಾಧಿಕಾರದ 54ನೇ ಸಭೆಯ ವಿಷಯ ಸಂಖ್ಯೆ:40ರ ತೀರ್ಮಾನದಂತೆ, ಏಕ ನಿವೇಶನ ನಕ್ಷೆಯಲ್ಲಿ ಬರುವ ರಸ್ತೆ ಪ್ರದೇಶವನ್ನು ಸಂಬಂಧಿಸಿದ ನಗರ ಸಭೆಗೆ ಹಸ್ತಾಂತರಿಸಲು ತೀರ್ಮಾನಿಸಲಾಗಿರುತ್ತದೆ. ಏಕ ನಿವೇಶನ ನಕ್ಷೆಯಲ್ಲಿನ ರಸ್ತೆಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಹಸ್ತಾಂತರಿಸಿಕೊಳ್ಳಲು ಕೋರಲಾಗಿದೆ. ನೋಂದಾಯಿಸಿಕೊಂಡಿರುವ ಪರಿತ್ಯಜನಾ ಪತ್ರದ ಪ್ರತಿಯೊಂದಿಗೆ ಈ ಪ್ರಾಧಿಕಾರಕ್ಕೆ ಮಾಹಿತಿ ನೀಡಲು ಕೋರಿದೆ.

ತಮ್ಮ ವಿಶ್ವಾಸಿ,

3/10/2015

ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಪ್ರತಿಯನ್ನು: ಮೆ.ರೇಡಿಯೆಂಟ್ ಪ್ರಾಪರ್ಟೀಸ್ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಸತ್ಯಶೇಖರ್, 'ಸತ್ಯಮ್ಸ್', ನಂ.48/49, 1ನೇ ಮಹಡಿ, 9ನೇ ಕ್ರಾಸ್, ಸಾರಕ್ಕಿ ಮುಖ್ಯರಸ್ತೆ, ರಾಜಶೇಖರ್ ಹಾಸ್ಪಿಟಲ್ ಎದುರು, ಜೆ.ಪಿ.ನಗರ 1ನೇ ಹಂತ, ಬೆಂಗಳೂರು-560 078ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಪರಿತ್ಯಜನಾ ಪತ್ರವನ್ನು ಮಾಡಿಕೊಡಲು ಈ ಮೂಲಕ ತಿಳಿಸಲಾಗಿದೆ.